ಜೆಎಸ್‌ಎಸ್ ಮಹಾವಿದ್ಯಾಪೀಠ
**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
(ಸ್ವಾಯತ್ತ)
**ಬಿ.ಎನ್. ರಸ್ತೆ, ಮೈಸೂರು – 570 025**
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
Ph: 0821-2548236 & 2548380. FAX: 0821-2548238 E-mail: jssautonomous@gmail.com Website: JSSCACS.edu.in

ದಿನಾಂಕ: 22.11.2017

**ಪ್ರಕಟಣೆ ಕೃಪೆಗಾಗಿ**

ರಾಷ್ಟ್ರದ ಮುನ್ನಡೆಗೆ ಜಿಎಸ್‌ಟಿ ಸಹಾಯಕ

– ಡಾ. ಬಾಣೇಗೌಡ

ಮೈಸೂರು ನಗರದ ಬಿಎನ್ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಸ್ನಾತಕೋತ್ತರ ವಾಣಿಜ್ಯಶಾಸ್ತ್ರ ವಿಭಾಗದಿಂದ "ಸರಕು ಮತ್ತು ಸೇವಾ ತೆರಿಗೆ ಕಾನೂನುಗಳು" ಎಂಬ ವಿಷಯದಲ್ಲಿ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಡಾ. ಬಾಣೇಗೌಡ, ಜಂಟಿ ಆಯುಕ್ತರು (ಆಡಳಿತ), ವಾಣಿಜ್ಯ ತೆರಿಗೆ ಇಲಾಖೆ, ಮೈಸೂರು ಇವರು ಮಾತನಾಡುತ್ತಾ, ನಮ್ಮ ರಾಷ್ಟ್ರವನ್ನು ಮೀರಿ ದೇಶ ವಿದೇಶಗಳಲ್ಲಿ ಸಂಚಲನ ಮೂಡಿಸಿರುವ ಜಿಎಸ್‌ಟಿ ತೆರಿಗೆ ವಿಧಾನವು ರಾಷ್ಟ್ರದ ಮುನ್ನಡೆಗೆ ಸಹಾಯಕ ಎಂದು ತಿಳಿಸಿದರು. ಸರ್ಕಾರಗಳ ನಿರ್ವಹಣೆ ಮತ್ತು ಯೋಜನೆಗಳಿಗೆ ತೆರಿಗೆ ಅವಶ್ಯಕವಾಗಿದೆ. ಅದನ್ನು ವಿವಿಧ ರೀತಿಯಲ್ಲಿ ಸಂಗ್ರಹ ಮಾಡಲಾಗುತ್ತದೆ. "ಜಿಎಸ್‌ಟಿ ತೆರಿಗೆಯು" ಏಕರೂಪದಲ್ಲಿದ್ದು, ಅದರಲ್ಲಿ ಅನೇಕ ಅನುಕೂಲಗಳಿವೆ. ಇದೇ ರೀತಿ ಪರೋಕ್ಷ ತೆರಿಗೆಗಳ ಬಗ್ಗೆ ಮತ್ತು ಹಲವು ಇಲಾಖೆಗಳು ತೆರಿಗೆಗಳನ್ನು ಸಂಗ್ರಹಿಸುತ್ತಿದ್ದರು ಎಂದು ತಿಳಿಸಿದರು. ಈ ನೂತನ ತೆರಿಗೆ ಪದ್ಧತಿಯು ಪರಿಚಯವಾಗಲು ಸಾಕಷ್ಟು ಸಮಯಬೇಕು ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಹಣಕಾಸು ವಿಭಾಗದ ನಿರ್ದೇಶಕರಾದ ಶ್ರೀ ಎಸ್ ಪುಟ್ಟಸುಬ್ಬಪ್ಪನವರು ಜಿಎಸ್‌ಟಿ ನಡೆದು ಬಂದ ದಾರಿಯನ್ನು ತಿಳಿಸುತ್ತಾ, "ವರ್ತಕರು ಮತ್ತು ಶಿಕ್ಷಣ ಸಂಸ್ಥೆಗಳು ಸಣ್ಣ ಪುಟ್ಟ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರೆ ಜಿಎಸ್‌ಟಿ ಕೌನ್ಸಿಲ್‌ನಿಂದ ಉಂಟಾಗುವ ಸಮಸ್ಯೆ ಕುರಿತು ತೆಗೆದುಕೊಳ್ಳುತ್ತಿರುವ ಕ್ರಮಗಳು ಪ್ರಶಂಸನೀಯವಾದುದು" ಎಂದರು. ಕಾಲೇಜಿನ ಮುಖ್ಯ ಕಾರ್ಯನಿರ್ವಹಕರಾದ ಪ್ರೊ ಬಿ ವಿ ಸಾಂಬಶಿವಯ್ಯ ಮತ್ತು ಪ್ರಾಂಶುಪಾಲರಾದ ಪ್ರೊ ಎಂ ಮಹದೇವಪ್ಪನವರು ಉಪಸ್ಥಿತರಿದ್ದರು.

ವಿಚಾರ ಸಂಕಿರಣದಲ್ಲಿ ಮೂರು ವಿಚಾರಗೋಷ್ಠಿಗಳು ನಡೆದಿದ್ದು ಶ್ರೀ. ಕೇಶವಡೊಂಗ್ರೆ, ಶ್ರೀ. ವಾಗೀಶ್ ಮತ್ತು ಶ್ರೀ. ಎಸ್.ಎ. ವಾಸುದೇವರಾವ್, ಸನ್ನದು ಲೆಕ್ಕದಾರರು ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸಿದ್ದರು.ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಡಾ. ಹೆಚ್ ಸಿ ಹೊನ್ನಪ್ಪನವರು ಸ್ವಾಗತಿಸಿದರು. ಕು. ಚೊಂದಮ್ಮ ಕಾರ್ಯಕ್ರಮವನ್ನು ನಿರೂಪಿಸಿದರು. ಡಾ ಆಶಾ, ಅಧ್ಯಾಪಕರು ವಂದಿಸಿದರು.

(ಪ್ರೊ.ಎಂ.ಮಹದೇವಪ್ಪ)

ಪ್ರಾಂಶುಪಾಲರು

ಗೆ

ಸಂಪಾದಕರು

– – – – – – – – – –

ಮೈಸೂರು